CHAPTER -15

ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

1. ಪ್ಲಾಸ್ಟಿಕ್ ಒಂದು ಪರಿಸರ ಮಾಲಿನ್ಯವನ್ನು ಉಂಟು ಮಾಡುವ ವಸ್ತು, ಏಕೆಂದರೆ,

   A) ಅದು ತುಂಬಾ ದುಬಾರಿ B) ಅದು ಜೈವಿಕ ವಿಘಟನೆಯಾಗದ ವಸ್ತು

   C) ಇದು ಜೈವಿಕ ವಿಘಟನೆಯಾಗುವ ವಸ್ತು D) ಬೇಗನೇ ತನ್ನ ಮೂಲ ರೂಪವನ್ನು ಬದಲಿಸುತ್ತದೆ.

2. ಹುಲ್ಲು → ಮಿಡತೆ→ ಕಪ್ಪೆ→ಹಾವು→ಹದ್ದು, ಒಂದು ಪ್ರದೇಶದ ಈ ಆಹಾರ ಸರಪಳಿಯಲ್ಲಿ ಯಾವುದೋ ಕಾರಣದಿಂದ ಅಲ್ಲಿನ ಮಿಡತೆಗಳೆಲ್ಲ ನಾಶ ಹೊಂದಿದರೆ, ಉಳಿದ ಯಾವುಗಳ ಸಂಖ್ಯೆ ಹೆಚ್ಚಾಗುತ್ತದೆ.

   A) ಹುಲ್ಲು B) ಮಿಡತೆ C) ಕಪ್ಪೆ D) ಹದ್ದು

3. ಯಾವುದೇ ಆಹಾರ ಸರಪಳಿಯಲ್ಲಿ ಸಾಮಾನ್ಯವಾಗಿ 3 ಅಥವಾ 4 ಹಂತಗಳು ಮಾತ್ರ ಇರುತ್ತವೆ. ಕಾರಣ

   A) ಮಾನವರು ಮತ್ತು ಇತರೆ ಪ್ರಾಣಿಗಳ ನಡೆವೆ ಉತ್ತಮ ಬಾಂಧವ್ಯ ಇಲ್ಲದಿರುವುದು

   B) ಮನುಷ್ಯರು ನಿರಂತರವಾಗಿ ಬೇಟೆಯಾಡಿ ಪ್ರಾಣಿಗಳ ಸಂಖ್ಯೆ ಕಡಿಮೆ ಮಾಡಿರುವುದು.

   C) ಪ್ರತಿ ಹಂತದಲ್ಲೂ ಶಕ್ತಿಯು ವ್ಯಯವಾಗಿ ಮುಂದಿನ ಜೀವಿಗಳಿಗೆ ಆಹಾರದ ಲಭ್ಯತೆ ಕಡಿಮೆಯಾಗುವುದು

   D) ಜೀವಿಗಳು ನಗರ ಪ್ರದೇಶಗಳಿಂದ ತುಂಬಾ ದೂರದಲ್ಲಿದ್ದು ಆಹಾರದ ಲಭ್ಯತೆ ಕಡಿಮೆಯಾಗುವುದು

4. ಓಜೋನ್ ಪದರದಿಂದಾಗುವ ಅನುಕೂಲತೆ/ಗಳು ಎಂದರೆ

   A) ಚರ್ಮದ ಕ್ಯಾನ್ಸರ್ ತಡೆಯುತ್ತದೆ B) ಹಾನಿಕಾರಕ ನೆರಳಾತೀತ ಕಿರಣಗಳನ್ನು ತಡೆಯುತ್ತದೆ

   C) ಭೂಮಿಗೆ ರಕ್ಷಾ ಕೊಡೆಯಂತೆ ಕಾರ್ಯನಿರ್ವಹಿಸುತ್ತದೆ D) ಮೇಲಿನ ಎಲ್ಲವೂ ಸರಿ

5. ಪರಿಸರದಲ್ಲಿ ಶಕ್ತಿಯ ಹರಿವು ಯಾವಾಗಲೂ ಈ ದಿಕ್ಕಿನಲ್ಲಿ ಇರುತ್ತದೆ.

   A) ಚಕ್ರೀಯ B) ಏಕಮುಖ C) ಪರಿವರ್ತನೆಯಾಗುತ್ತದೆ D) ಎಲ್ಲವೂ

6. CFC ಯಲ್ಲಿನ ಈ ರಾಸಾಯನಿಕ ವಸ್ತು ಓಜೋನ್ ಪದರಿಗೆ ಹಾನಿಯನ್ನು ಉಂಟು ಮಾಡುತ್ತದೆ.

   A) ಫ್ಲೋರಿನ್ B) ಕಾರ್ಬನ್ C) ಕ್ಲೋರಿನ್ D) ಎಲ್ಲವೂ

7. ಕೆರೆ→ ಮೀನು→ ಕೊಕ್ಕರೆ, ಈ ಆಹಾರ ಸರಪಳಿಯಲ್ಲಿ ಅತಿ ಹೆಚ್ಚು ಜೈವಿಕ ಸಾಂದ್ರತೆ ಕಂಡುಬರುವುದು.

   A) ಕೆರೆ B) ಮೀನುತ C) ಕೊಕ್ಕರೆ D) ಎಲ್ಲವೂ

8. ಜೀವಿಗಳು/ ವಸ್ತುಗಳು ವಿಘಟನೆಯಾಗಬೇಕಾದರೆ ಇವುಗಳ ಪಾತ್ರ ತುಂಬಾ ಮಹತ್ವದ್ದಾಗಿದೆ

   A) ವೈರಸ್ & ಶೈವಲ B) ಬ್ಯಾಕ್ಟೀರಿಯಾ & ಪೂತಿ ಜೀವಿಗಳು

   C) ಎಲ್ಲಾ ಏಕಕೋಶ ಜೀವಿಗಳು D) ಎರೆಹುಳು

9. ಆಹಾರಕ್ಕಾಗಿ ಒಂದು ಜೀವಿಯು ಇನ್ನೊಂದು ಜೀವಿಯನ್ನು ತಿಂದಾಗ ಉಂಟಾಗುವ ವ್ಯವಸ್ಥೆ

   A) ಆಹಾರ ಜಾಲ B) ಆಹಾರ ಸರಪಳಿ C) ಕೊಳೆತಿನಿ D) ಯಾವುದೂ ಅಲ್ಲ

10. ಒಂದು ಜೀವಿಯನ್ನು ಇನ್ನೊಂದು ಜೀವಿ ತಿಂದಾಗ ಅದಕ್ಕೆ ದೊರೆಯುವ ಶಕ್ತಿಯ ಶೇಕಡಾ ಪ್ರಮಾಣ

    A) 50% B) 100% C) 90% D) 10%

LIVEWORKSHEETS

CHAPTER -16

ಈ ಕೆಳಗಿನ ಪ್ರತಿ ಪ್ರಶ್ನೆಗೆ ನೀಡಿದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿರಿ.

1. ಗಂಗಾ ಕಾರ್ಯ ಯೋಜನೆ ಜಾರಿಯಾದ ವರ್ಷ

   A) 1981 B) 1985 C) 1973 D) 1986

2. ಮಾನವನ ಸಣ್ಣ ಕರುಳಿನಲ್ಲಿರುವ ಈ ಬ್ಯಾಕ್ಟೀರಿಯಾ ಜಲ ಮೂಲಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಕಂಡು ಬಂದರೆ ಅದು ಜಲಮಾಲಿನ್ಯದ ಸಂಕೇತವಾಗಿದೆ.

   A) ಸ್ಟೈಪ್ಟೋಕಾಕಸ್ B) ಸಾಲ್ಮೊನೆಲ್ಲಾ ಟೈಫಿ
   C) ವಿಬ್ರಿಯೋ ಕಾಲರೆ D) ಕೋಲಿಫಾರ್ಮ್

3. ಪರಿಸರ ಸಂರಕ್ಷಣೆಯ 5 'R' ಗಳಲ್ಲಿ ಇದು ಸೇರಿಲ್ಲ (ತಪ್ಪಾಗಿದೆ).

   A) ಮಿತಬಳಕೆ B) ಮರುಬಳಕೆ C) ನಿರಾಕರಣೆ D) ನಿರಾಪೇಕ್ಷಣೆ

4. ಇದು ಪರಿಸರ ಸಂರಕ್ಷಣೆಯ ಉತ್ತಮ ವಿಧಾನವಾಗಿದೆ.

   A) ಪ್ಲಾಸ್ಟಿಕ್ ಕೈ ಚೀಲ ಬಳಕೆ B) ಡೀಸೆಲ್ ವಾಹನ ಬಳಕೆ
   C) ಬಟ್ಟೆ ಕೈ ಚೀಲ ಬಳಕೆ D) ಕಟ್ಟಿಗೆ ಒಲೆಗಳ ಬಳಕೆ

5. ಉಪ್ಪಿನ ಕಾಯಿ ಖಾಲಿಯಾದ ನಂತರ ಆ ಡಬ್ಬಿಯನ್ನು ಸಕ್ಕರೆ ಹಾಕಲು ಬಳಸುವುದು

   A) ಮಿತಬಳಕೆ B) ಮರುಬಳಕೆ C) ನಿರಾಕರಣೆ D) ಮರು ಚಕ್ರೀಕರಣ

6. ಒಬ್ಬ ವಿದ್ಯಾರ್ಥಿನಿಯ ಮನೆಯಲ್ಲಿನ ಪ್ಲಾಸ್ಟಿಕ್ ಕೊಡವು ಒಡೆದು ಬಳಸಲು ಬಾರದಂತಾಗಿದೆ. ಪರಿಸರ ಸಂರಕ್ಷಣೆಯ ದೃಷ್ಟಿಯಲ್ಲಿ ಇದನ್ನು ನೀವು ಯಾವ ವಿಧಾನದ ಮೂಲಕ ವಿಲೇವಾರಿ ಮಾಡುವಿರಿ.

   A) ಮಿತಬಳಕೆ B) ಮರುಬಳಕೆ C) ಮರು ಉದ್ದೇಶ D) ಮರು ಚಕ್ರೀಕರಣ

7. ಒಂದು ಪ್ರದೇಶದಲ್ಲಿ ಕಂಡು ಬರುವ ಇವುಗಳು ಜೀವ ವೈವಿಧ್ಯತೆಯ ಒಂದು ಮೂಲ ಮಾಪನವಾಗಿದೆ.

   A) ಪ್ರಭೇದ B) ಗಣ C) ಸಾಮ್ರಾಜ್ಯ D) ಕುಟುಂಬ

8. ಈ ಎಲೆಯನ್ನು ಬೀಡಿ ಕಟ್ಟಲು ಬಳಸುತ್ತಾರೆ.

   A) ವೀಳ್ಯದೆಲೆ B) ತೆಂಡು ಎಲೆ C) ಬಾಳೆ ಎಲೆ D) ತೇಗದ ಎಲೆ

9. ರಾಜಸ್ಥಾನದ ಬಿಷ್ನೋಯಿ ಸಮುದಾಯ ಈ ಮರದ ಉಳಿವಿಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರು.

   A) ಬೇವಿನ ಮರ B) ಆಲದ ಮರ C) ಖೇಜ್ರಿ ಮರ D) ತೇಗದ ಮರ

10. ಚಿಪ್ಕೋ ಚಳುವಳಿ (ಅಪ್ಪಿಕೋ ಚಳುವಳಿ) ನಡೆದ ಸ್ಥಳ

    A) ಚಂಡೀಗಢ B) ಫರ್ವಾಲ್‌ನ ರೇನಿ C) ಅಮೃತಸರ D) ಜೋಗೆಲ್ಲಾಪುರ

LIVEWORKSHEETS